ಏನು, ಎತ್ತ ಅಂತ ವಿಚಾರಿಸಿದವಳು, ಯಾವುದೋ ಅಪಾಯದ ಸೂಚನೆಯನ್ನು ಗ್ರಹಿಸಿದವಳೇ ತನ್ನ ಗಂಡ ಇಲ್ಲದ ವಿಚಾರವನ್ನು ಅರುಹಿದಳು. ಯಾರೂ ಅದನ್ನು ನಂಬಲು ತಯಾರಿರಲಿಲ್ಲ. ಒಂದಿಬ್ಬರು ಬೈಕಿನಲ್ಲಿ ಊರಿನವರೆಗೆ ಹೋದವರು ಆತನ ಹೆಂಡತಿ ಹೀಗ್ಹೀಗೆ ಹೇಳುತ್ತಿದ್ದಾಳೆಂದು ವರದಿ ಒಪ್ಪಿಸಿದರು. ಸುಮಾರು ಐವತ್ತು ಹುಡುಗರ ಗುಂಪು ಅವನು ದೊಡ್ಡ ಕ್ರಿಮಿನಲ್ಲು, ಅವನನ್ನು ಹಂಗೇ ಬಿಡಬಾರದು ಎಂದು ಬೈಕುಗಳಲ್ಲಿ ಅವನ ಬಂಗಲೆಯತ್ತ ತೆರಳಿದರು.

ಯಾವಾಗ ಊರಿನ ಗುಂಪೆಲ್ಲ ಅವನ ಮನೆಯ ಸುತ್ತ ನೆರೆಯಲಾರಂಭಿಸಿತೋ, ಲೈಟು ಆರಿಸಿ ಮನೆಯ ಕಿಟಕಿಯೊಳಗಿಂದ ಇಣುಕಿಣುಕಿ ನೋಡಿ ಅಪಾಯದ ಮುನ್ಸೂಚನೆಯನ್ನು ಗ್ರಹಿಸಿ ಪೊಲೀಸರಿಗೆ ಫೋನು ಮಾಡಿ ಕರೆಸಿದ. ಅವರು ಬರುವಷ್ಟರಲ್ಲಿ ಜನ ಕೆಟ್ಟ ಕೊಳಕ ಬೈಗುಳಗಳ ಜೊತೆಗೆ ಅವನ ಮನೆಯ ಮೇಲೆಲ್ಲ ಕಲ್ಲುಗಳ ಸುರಿಮಳೆಗೈದು ಕಿಟಕಿಯ ಗಾಜುಗಳನ್ನೆಲ್ಲ ಒಡೆದು ಹಾಕಿದರು. ಸುಂದರವಾಗಿ ಕೆತ್ತಿಸಿದ್ದ ಬಾಗಿಲಿಗೆಲ್ಲ ಕಲ್ಲು ತೂರಿ ವಿಕಾರಗೊಳ್ಳುವಂತೆ ಮಾಡಿಬಿಟ್ಟರು. ಅಷ್ಟರಲ್ಲಿ ಬಂದ ಪೊಲೀಸರು ಜನರನ್ನೆಲ್ಲ ಚದುರಿಸಿದರು. ಯಾರಾದರೂ ಮುಂದೆ ಬಂದರೆ ಡಕಾಯಿತಿ ಕೇಸು ಜಡಿದು ಅರೆಸ್ಟ್ ಮಾಡಿ ಒಳಗೆ ಹಾಕುವುದಾಗಿ ಬೆದರಿಸಿದರು.

ಬೆಳಗ್ಗೆ ಪೊಲೀಸರನ್ನು ಮನೆಗೇ ಕರೆಸಿಕೊಂಡು ತನಗೂ, ತನ್ನ ಕಚೇರಿಯ ಗ್ಯಾಂಗ್‌ಮನ್‌ಗೂ ಸರ್ಕಾರೀ ಕರ್ತವ್ಯಕ್ಕೆ ಅಡ್ಡಿಪಡಿಸಿದ ಕಲಮಿನ ಅಡಿ ದೂರು ದಾಖಲಿಸಿಕೊಳ್ಳುವಂತೆ ದೂರು ಬರೆದುಕೊಟ್ಟ. ಯಾವಾಗ ಬಂಧಿಸಲು ಪೊಲೀಸರು ಬಂದರೋ ಆವಾಗ ಊರವರೆಲ್ಲ ಒಬ್ಬೊಬ್ಬರಾಗಿ ಸೇರಿಕೊಂಡವರು, ಅವನನ್ನೂ ಅವನ ಮೇಲಾಧಿಕಾರಿಯನ್ನೂ ಇಲ್ಲಿಗೇ ಕರೆಸಬೇಕಂತಲೂ, ಆಗ ತಾವಾಗಿಯೇ ಠಾಣೆಗೆ ಬರುವುದಾಗಿಯೂ ಪಟ್ಟು ಹಿಡಿದರು. ಆದರೆ ಪೊಲೀಸರು ಉರಿಯುವ ಬೆಂಕಿಗೆ ತುಪ್ಪ ಹಾಕುತ್ತಾರೆಯೇ... ಸಂಬಂಧಪಟ್ಟ ಆರೋಪಿಗಳಾರೂ ಸಿಗದೇ ತಪ್ಪಿಸಿಕೊಂಡಿದ್ದಾರೆಂದು ವರದಿ ಒಪ್ಪಿಸಲು ಹಿಂದಿರುಗಿದರು.

ಆ ಕಾಡಿನಲ್ಲಿ ಹುಟ್ಟಿದಾಗಿನಿಂದ ಹಿಡಿದು ಈವರೆಗಿನ ಸುಮಾರು ಐನೂರು ವರ್ಷಗಳವರೆಗಿನ ನನ್ನ ಅನುಭವದಲ್ಲಿ ನಾನು ಕಂಡ ಅತ್ಯಂತ ಅಪಾಯಕಾರಿ ಪ್ರಾಣಿ ಅಂತ ಯಾವುದಾದರೂ ಭೂಮಿ ಮೇಲೆ ಇದೆ ಅಂದರೆ ಅದು ಮನುಷ್ಯನೇ. ಎಲ್ಲ ಪ್ರಾಣಿಪಕ್ಷಿಗಳು ತಮಗೆ ಎಷ್ಟು ಬೇಕೋ ಅಷ್ಟನ್ನು ತಿಂದೋ ಉಂಡೋ ಹೊರಟುಬಿಡುತ್ತವೆ. ಇಲ್ಲವೇ ತಮಗೆ ವೈಯಕ್ತಿಕವಾಗಿ ತೊಂದರೆ ಆದಲ್ಲಿ ಮಾತ್ರ ಜೀವ ಉಳಿಸಿಕೊಳ್ಳಲು ತಿರುಗಿಬೀಳುತ್ತವೆ. ಬಿಟ್ಟರೆ ಮನುಷ್ಯನಂತೆ ತನಗೂ ಬೇಕೂ, ತನ್ನ ಮಕ್ಕಳುಮೊಮ್ಮಕ್ಕಳುಮರಿಮಕ್ಕಳಿಗೂ ಬೇಕೆಂದು ಗುಡಿಸಿ ಗುಡ್ಡೆಹಾಕಿಕೊಳ್ಳುವುದಿಲ್ಲ.

ರಷ್ಯಾದಲ್ಲೂ, ಚೀನಾದಲ್ಲೂ ಹಂಗೇ ಇದೆಯಂತೆ. ತನ್ನ ಅವಶ್ಯಕತೆಗೆ ಎಷ್ಟು ಬೇಕೋ ಅಷ್ಟು ಮಾತ್ರ ಇಟ್ಟಕೋಬೇಕಂತೆ, ಉಳಿದದ್ದನ್ನೆಲ್ಲ ಸರ್ಕಾರವೇ ನೋಡಿಕೊಳ್ಳುತ್ತದಂತೆ. ಇಂಥ ಒಂದು ಆರ್ಥಿಕ ಶಿಸ್ತನ್ನು ನೂರು ವರ್ಷಗಳ ಹಿಂದೆಯೇ ರೂಪಿಸಿದ ಕಾರ್ಲ್‌ಮಾರ್ಕ್ಸ್ ಅವರಿಗೆ ಆದರ್ಶವಂತೆ. ಮನುಷ್ಯನಿಗೆ ನೈತಿಕತೆ ಎಂಬುದೊಂದಿದ್ದರೆ ಅವನ ದುರಾಸೆಗೊಂದು ಕಡಿವಾಣವಿರುತ್ತದೆ. ಇಲ್ಲವೆಂದರೆ ಹೀಗೆ ತನಗಿಷ್ಟ ಬಂದಂತೆ ವರ್ತಿಸುತ್ತಿರುತ್ತಾನೆ. ಒಂದೊಂದು ಸಲ ಯೋಚಿಸಿದರೆ ಈ ದುರಾಸೆಯ ಮನುಷ್ಯರನ್ನು ಮಟ್ಟ ಹಾಕಬೇಕೆಂದರೆ ಹಂಗೇ ಮಾಡಬೇಕೇನೋ ಅಂತಲೂ ಅನ್ನಿಸುತ್ತದೆ.

ಇಷ್ಟೆಲ್ಲ ವಿಷಯ ನನಗೆ ಹೇಗೆ ತಿಳಿಯುತ್ತದೆ ಎಂದು ನಿಮಗೆ ಆಶ್ಚರ್ಯವೇ? ನನ್ನ ಪಕ್ಕ ಒಂದೇ ಒಂದಿದ್ದ ಕಾಳಿಂಗನ ಮನೆಯ ಸುತ್ತಲೂ ನೂರಾರು ಮನೆಗಳಾಗಿ ಅದು ಹಳ್ಳಿಯಾಗಿ, ಪಟ್ಟಣವಾಗಿ, ನಗರವಾಗಿ, ಈಗ ಮಹಾನಗರವಾಗಿ ಬೆಳೆದಿದೆ. ಮೊದಮೊದಲು ನನ್ನ ಪಕ್ಕಕ್ಕೇ ಪ್ರಾಥಮಿಕ ಶಾಲೆ ಶುರುವಾಯಿತು. ಹಂಗೇ ಅದು ಹೈಸ್ಕೂಲಾಯಿತು. ಅಲ್ಲಿ ಮೇಷ್ಟ್ರುಗಳು ಮಾಡುತ್ತಿದ್ದ ಪಾಠವೆಲ್ಲ ನನಗೆ ಕೇಳಿಸುತ್ತಿತ್ತು. ಕಾಲೇಜು ಬಂದ ಮೇಲಂತೂ ನನ್ನ ಜ್ಞಾನ ವಿಸ್ತಾರವಾಗಲಾರಂಭಿಸಿತು. ಅಲ್ಲಿ ಇಡೀ ಪ್ರಪಂಚದ ಇತಿಹಾಸವನ್ನೆಲ್ಲ ಹೇಳುತ್ತಿದ್ದರು. ಅದೆಲ್ಲ ಕೇಳುತ್ತಿದ್ದರೆ ನಾನು ಇದುವರೆಗೂ ತಿಳಿದಿದ್ದೆಲ್ಲ ಬಹಳ ಕಡಿಮೆ ಎಂದು ನನಗೇ ಅನ್ನಿಸಲಾರಂಭಿಸಲಾರಂಭಿಸಿತು. ನಂತರ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜಿನಲ್ಲಿ ಮಾಡುವ ಪಾಠಗಳಿಂದಾಗಿ ಪ್ರಪಂಚದ ಸಕಲ ವಿಷಯಗಳೆಲ್ಲ ನನಗೆ ತಿಳಿಯಲಾರಂಭಿಸಿದವು.

ಮೊದಮೊದಲು ನನ್ನ ಕಟ್ಟೆಯ ಮೇಲೇ ಗಣಪತಿ ಕೂರಿಸುತ್ತಿದ್ದರು. ಅದು ಸ್ವಾತಂತ್ರ್ಯ ಸಂಗ್ರಾಮದ ಕಾಲ. ಬಿಡಿಬಿಡಿಯಾಗಿದ್ದ ಜನರನ್ನು ಇಡಿಇಡಿಯಾಗಿ ಒಗ್ಗೂಡಿಸಿ ಬ್ರಿಟಿಷರ ವಿರುದ್ಧ ಹೋರಾಡಬೇಕೆಂದು ಬಾಲಗಂಗಾಧರ ತಿಲಕ್ ಎಂಬುವವರು ಮುಂಬೈ ಪ್ರಾಂತ್ಯದಲ್ಲಿ ಮೊದಲು ಆರಂಭಿಸಿದರಂತೆ. ಆ ನೆಪದಲ್ಲಿ ಆರಂಭವಾದ ವಿನಾಯಕ ಸಂಘದವರು ನನ್ನ ಕಟ್ಟೆಯನ್ನೇ ವೇದಿಕೆ ಮಾಡಿಕೊಂಡು ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಆಮೇಲಾಮೇಲೆ ಊರಲ್ಲಿ ದೇವಸ್ಥಾನ ಕಟ್ಟಿದ್ದು. ಗಣಪತಿ ಕಾರ್ಯಕ್ರಮದಲ್ಲಿ ನಮ್ಮ ಕಾಮಧೇನುವಿನ ಕಥೆಯನ್ನು ರೂಪಕ ಮಾಡಿ ಮಕ್ಕಳು ಆಡಿ ತೋರಿಸಿದ್ದವು. ಇದು ನಮ್ಮೂರಿನ ಕಥೆಯೇ ಆದ್ದರಿಂದ ಜನರ ಮನಸ್ಸನ್ನು ನಾಟುತ್ತಿತ್ತು. ಅದನ್ನು ಕೇಳುತ್ತಿದ್ದರೆ, ನೋಡುತ್ತಿದ್ದರೆ ನನಗೂ ಒಂದು ಸಲ ಅಳು ಬಂದಂತಾದದ್ದು ಸುಳ್ಳಲ್ಲ. ಆ ಪಾತ್ರಗಳನ್ನೆಲ್ಲ ನಾನೇ ಸ್ವತಃ ಕಂಡು ಕೇಳಿ ಅರಿತಿದ್ದೆನಲ್ಲವೇ?

ಅದೇ ಗಣಪತಿಯ ಬಗ್ಗೆ ಒಬ್ಬ ರ್‍ಯಾಡಿಕಲ್ ಸ್ವಾಮೀಜಿ ಬಂದು ಒಂದು ಸಲ ಆಶೀರ್ವಚನ ನೀಡಿದ್ದರು: 'ಗಣಪತಿಯ ಕಥೆಯನ್ನು ಯಾವ ಕಥೆಗಾರ, ಕವಿ ಕಂಡು ಈ ಪರಿ ತನ್ನ ಅತೀಂದ್ರಿಯ ಶಕ್ತಿಯಿಂದ ವರ್ಣಿಸಿದ್ದಾನೋ ಅವನಿಗೆ ಭೇಶ್ ಅನ್ನಲೇಬೇಕು ರೀ... ಒಂದು ಸಾರಿ ಪಾರ್ವತಿ ಸ್ನಾನ ಮಾಡಕ್ಕೋಗಿದ್ಲಂತೆ. ಆಕೆಯ ಸ್ನಾನಗೃಹದ ಮುಂದೆ ಕಾವಲಿಗೆ ಅಂತ ತನ್ನ ಮೈಮೇಲಿನ ಕೊಳೆಯನ್ನ, ಮಣ್ಣನ್ನ ಕೂಡಿಸಿ ಒಂದು ಗೊಂಬೆ ಮಾಡಿ, ಅದಕ್ಕೆ ಜೀವ ಬರಿಸಿ ಕಾವಲಿಗೆ ಇಟ್ಟಿದ್ದಳಂತೆ. ಯಾಕೆ ಆ ಸ್ನಾನಗೃಹಕ್ಕೆ ಬಾಗಿಲು ಇರಲಿಲ್ಲವೇ? ಇರಲಿಲ್ಲ ಎಂದೇ ಇಟ್ಟುಕೊಳ್ಳೋಣ. ಆಕೆ ದೇವತೆಯಲ್ಲವೇ... ಪರಿಚಾರಿಕೆಯರಿರಲಿಲ್ಲವೇ? ಅವರಲ್ಲಿ ಯಾರನ್ನಾದರೂ ಕಾವಲಿಗೆ ಇರಿಸಬಹುದಾಗಿತ್ತಲ್ಲ? ಹೋಗಲಿ ಸ್ನಾನ ಮಾಡೋಕ್ಕೆ ಮುಂಚೇನೇ ತನ್ನ ಮೈಯಲ್ಲಿ ಅಂಟಿದ್ದ ಕೊಳೆಯನ್ನು ಹೇಗೆ ಹೊರತೆಗೆದಳು. ಕೊಳೆ ತೆಗೆದ ಮೇಲೆ ಸ್ನಾನ ಮಾಡೋ ಅವಶ್ಯಕತೆಯಾದರೂ ಏನಿತ್ತು. ಇರಲಿ. ಕೊಳೆಯಿಂದಲೇ ಶಿಶುವನ್ನು ನಿರ್ಮಿಸಿದಳು ಅಂದರೆ ಅವಳ ಮೈಮೇಲೆ ಅದೆಷ್ಟು ಮಣ್ಣು ಧೂಳು ಕೂತಿರಬೇಡ. ಅಂದರೆ ಆ ತಾಯಿ ಅದೆಷ್ಟು ವರ್ಷದಿಂದ ಸ್ನಾನ ಮಾಡದೇ ಹಾಗೇ ಇದ್ದಳು? ನಂತರ ನನ್ನಂಥವರು ಇಂಥದನ್ನು ಪ್ರಶ್ನಿಸಿದ ಮೇಲೆ ಪಾಠಾಂತರ ಏನು ಮಾಡಿದರೂ ಅಂದರೆ ಸುಗಂಧ ದ್ರವ್ಯದಿಂದ ಗಣಪತಿಯನ್ನು ನಿರ್ಮಿಸಿದಳಂತೆ. ಅಂದರೆ ಕೇಜಿಗಟ್ಟಲೆ ಸುಗಂಧ ದ್ರವ್ಯವನ್ನು ಮೆತ್ತಿಕೊಂಡಿದ್ದಳೇ? ಇರಲಿ. ಶಿವ ಬಂದ.

ದೊಡ್ಡ ದೇವರು. ಗಣಪತಿ ಅಮ್ಮ ಸ್ನಾನ ಮಾಡುತ್ತಿದ್ದಾಳೆ ಅಂತ ಹೇಳಿದರೂ ಕೂಡ ಅವಳು ಸ್ನಾನ ಮುಗಿಸಿ ಬರುವವರೆಗೂ ಕಾಯದೇ, ಆ ಮಗುವಿನ ತಲೆ ಕಡಿದು ಒಳಗೆ ಹೋಗುವಂಥ ತುರ್ತು ಏನಿತ್ತು? ಆಯಿತು. ನಂತರ ಪಾರ್ವತಿ ಸ್ನಾನ ಮುಗಿಸಿಕೊಂಡು ಹೊರಬರುವವರೆಗೂ ಏನು ಮಾಡುತ್ತಿದ್ದ? ಪಾರ್ವತಿ ಬಂದು ನೋಡುತ್ತಾಳೆ, ಮಗುವಿನ ರುಂಡ ಮುಂಡ ಬೇರೆ ಬೇರೆಯಾಗಿದೆ! ಶಿವನನ್ನು ಬೇಡಿಕೊಂಡಳು: ನನ್ನ ಮಗನನ್ನು ಉಳಿಸಿಕೊಡಿ ಅಂತ. ಶಿವ ತನ್ನ ಸಹಾಯಕರಿಗೆ ಹೇಳಿದ: ಉತ್ತರ ದಿಕ್ಕಿಗೆ ತಲೆ ಹಾಕಿ ಮಲಗಿರುವ ಯಾವುದಾದರೂ ಪ್ರಾಣಿಯ ತಲೆಯನ್ನು ಕಡಿದು ತನ್ನಿ ಅಂತ. ಉತ್ತರಕ್ಕೇ ಮಲಗಿದ್ದ ತಲೆ ಯಾಕೆ ಬೇಕಿತ್ತು? ಪೂರ್ವ, ಪಶ್ಚಿಮ, ದಕ್ಷಿಣದ ತಲೆಗಳು ಕೂಡಲ್ಲ ಅಂತಿದ್ವೇನು? ಹೋಗಲಿ ರೀ. ಅವನು ಜಗದೋದ್ಧಾರಕ. ಈಗ ಅದೇನೋ ಪ್ಲಾಸ್ಟಿಕ್ ಸರ್ಜರಿ ಅಂತ ಮಾಡ್ತಾರಂತಲ್ಲ, ಹಂಗೇ ಆ ತಲೆಯನ್ನೇ ಕೂಡಿಸಿ ಆ ಬಾಲಕನನ್ನು ಬದುಕಿಸಬಹುದಾಗಿತ್ತಲ್ಲ. ಇನ್ನೊಂದು ಪ್ರಾಣಿಯ ತಲೆಯನ್ನು ಕಡಿದು ಅದನ್ನೂ ಯಾಕೆ ಕೊಲೆ ಮಾಡ್ಬೇಕಾಗಿತ್ತು?

ಇಲ್ಲಿ ಉತ್ತರಕ್ಕೆ ಮಲಗಿದ್ದ ತಲೆ ಅಂಥ ಇದೆಯಲ್ಲ, ಅಲ್ಲೇ ಇರೋದು ಸ್ವಾರಸ್ಯ. ಮೊದಲಿನಿಂದಲೂ ಶೈವರೂ ವೈಷ್ಣವರಿಗೂ ಸಂಘರ್ಷ ನಡಿತಾ ಇತ್ತು. ದಕ್ಷಿಣದವರು ದ್ರಾವಿಡರು, ಶಿವ ದಕ್ಷಿಣದ ಮೂಲ ನಿವಾಸಿಗಳ ದೇವರು. ಅವರಿಗೂ ಉತ್ತರದ ವಿಷ್ಣು ಭಕ್ತರಿಗೂ ಒಂದು ರೀತಿಯ ಸಾಂಸ್ಕೃತಿಕ ಸಂಘರ್ಷ ಪರಂಪರಾನುಗತವಾಗಿ ನಡೆದೇ ಬಂದಿದೆ. ಅಂದರೆ ಇದನ್ನು ಬರೆದಂತಹ ಲೇಖಕ ಅಥವಾ ಹಾಡುಗಾರ, ತನಗಿರುವ ಉತ್ತರದವರ ತಲೆ ಕತ್ತರಿಸಬೇಕೆಂಬಷ್ಟು ಸಿಟ್ಟನ್ನು ಈ ರೀತಿ ತೀರಿಸಿಕೊಂಡಿದ್ದಾನೆ.

(ಸಶೇಷ)